

# ಗಾಯಕಿ ಮಲ್ಲಿಕಾ

ಮಲ್ಲಿಕಾ ಶೆರಾವತ್ ಅಮೆರಿಕಾದಿಂದ ಗಂಟುಮೂಟೆ ಕಟ್ಟಿಕೊಂಡು ಬಾಲಿವುಡ್‌ಗೆ ಬಂದಿಳಿದ ಬಳಿಕ ಹೊಸ ಅವಕಾಶಗಳಿಗೇನೂ ಕೊರತೆಯಾಗಿಲ್ಲ. ಹಾಲಿವುಡ್‌ನಲ್ಲಿ ಅತ್ಯಧಿಕ ಪ್ರಚಾರ ಪಡೆದ ಈ ಮುಂಬೈ ನಟಿ, ಅಲ್ಲಿ ನಟಿಸಿದ ಚಿತ್ರಗಳಿಂದ ಹೆಚ್ಚೇನೂ ಲಾಭ ಕಾಣದೆ ವಾಪಸಾದದ್ದು ಎನ್ನುವುದು ಎಲ್ಲರಿಗೂ ಗೊತ್ತಿರುವ ಸತ್ಯ. 'ಕೇವಲ ಸೆಕ್ಸ್‌ಬಾಂಬ್ ಎಂಬ ಅಭಿದಾನವೊಂದೇ ಹಾಲಿವುಡ್‌ನಲ್ಲಿ ಕೆಲಸಕ್ಕೆ ಬರುವುದಿಲ್ಲ' ಎನ್ನುವುದು ಆಕೆಗೆ ತಡವಾಗಿ ಗೊತ್ತಾದಂತಿದೆ. ಅದೇನೇ ಇರಲಿ, ಈ ಹಿಂದೆ ಮಲ್ಲಿಕಾ ಕಾಲ್‌ಷೀಟ್ ಕೈಗೆಟುಕದೆ ದೂರ ಉಳಿದಿದ್ದ ಹಲವು ನಿರ್ಮಾಪಕರು ಈಗ ಮಲ್ಲಿಕಾಳ ಎರಡನೇ ಇನಿಂಗ್ಸ್‌ನಲ್ಲಿ ಮುನ್ನಡೆಸಲು ಮುಗಿ ಬಿದ್ದಿದ್ದಾರೆ.

ಮುಂಬೈಗೆ ಮರಳಿದ ಬಳಿಕ ಮಲ್ಲಿಕಾಳ ಹೊಸ ಚಿತ್ರ ಇದೀಗ ಸೆಟ್ಟೇರಿದೆ. ಅಫ್ಜಲ್ ರಿಜ್ವಿ ನಿರ್ದೇಶಿಸುತ್ತಿರುವ ಈ ಚಿತ್ರದ ಹೆಸರು 'ಅಕ್ಕಿ ಅನ್‌ಲಕ್ಕಿ'. ಈ ಸಿನಿಮಾದಲ್ಲಿ ಮಲ್ಲಿಕಾಗೆ ಅಥ್ಲೀಟ್ ಪಾತ್ರ. ಉದ್ದನೆಯ ಕಾಲುಗಳ ನಟಿ ಎಂದೇ ಹೆಸರಾದ ಮಲ್ಲಿಕಾಗೆ ಈ ಪಾತ್ರ ಸರಿ ಹೊಂದಬಹುದು. ಚಿತ್ರದ ನಾಯಕ ಸೋನು ಸೂದ್.

ಸುದ್ದಿ ಅದಲ್ಲ; ಈ ಚಿತ್ರದಲ್ಲಿ ಮಲ್ಲಿಕಾ ಒಂದು ಹಾಡನ್ನೂ ಹಾಡಲಿದ್ದಾಳಂತೆ! ಸಂಟೋಕ್‌ಸಿಂಗ್ ಕಂಪೋಸ್ ಮಾಡಿರುವ ಹಾಡು ಹರ್ಯಾಣೀ ಭಾಷೆಯಲ್ಲಿದೆ. ಮಲ್ಲಿಕಾಳ ಮಾತೃಭಾಷೆಯೂ ಅದೇ ಆಗಿರುವುದರಿಂದ ಹಾಡಲೇನೂ ತೊಂದರೆಯಿಲ್ಲ. ಜತೆಗೆ ಸೋನು ಸೂದ್ ಕೂಡಾ ಈ ಹಾಡಿಗೆ ದನಿಗೂಡಿಸಲಿದ್ದಾನಂತೆ. ಇಬ್ಬರಿಗೂ ಸುಲಭವಾಗಿ ಹಾಡಲು ಆಗುವಂತಹ ಟ್ಯೂನ್ ಒಂದಕ್ಕೆ ಸಿದ್ಧತೆ ಜೋರಾಗಿ ನಡೆದಿದೆಯಂತೆ. ತೆರೆಯ ಮೇಲಿನ ಕಿಸ್‌ಗಳಿಗೆ ಹೆಸರಾಗಿದ್ದ ಮಲ್ಲಿಕಾ, ಇನ್ನು ಮುಂದೆ ಗಾಯಕಿಯಾಗಿಯೂ ಪ್ರಸಿದ್ಧಿಗೆ ಬರಬಹುದೇನೋ! ■

# ಬರುತ್ತಿದೆ ಅಗ್ನಿಪಥ್



ಒಂದು ಚಿತ್ರವನ್ನು ಎಷ್ಟು ಸಲ ರಿಮೇಕ್ ಮಾಡಬಹುದು.. ಹೇಗೆಲ್ಲಾ ರಿಮೇಕ್ ಮಾಡಬಹುದು.. ಎನ್ನುವುದೂ ಈಗ ಸೃಜನಶೀಲ ಕ್ರಿಯೆಯೇ. ಈ 'ಅಗ್ನಿಪಥ್' ಎಂಬ ಚಿತ್ರವನ್ನೇ ತೆಗೆದುಕೊಳ್ಳಿ. 1990ರಲ್ಲಿ ಅಮಿತಾಭ್ ಬಚ್ಚನ್, ಮಿಥುನ್ ಚಕ್ರವರ್ತಿ ಮತ್ತು ಮಾಧವಿ ನಟಿಸಿದ 'ಅಗ್ನಿಪಥ್' ಆ ಕಾಲಕ್ಕೆ ಅತ್ಯಂತ ದೊಡ್ಡ ಹಿಟ್. ನಿರ್ದೇಶಕ ಮುಕುಲ್ ಆನಂದ್‌ಗೂ ಅದು ದೊಡ್ಡ ಹೆಸರು ತಂದುಕೊಟ್ಟಿತು. ಅದನ್ನೇ ಈಗ ಹೃತಿಕ್ ರೋಶನ್ ನಾಯಕತ್ವದಲ್ಲಿ ಕರಣ್ ಮಲ್ಹೋತ್ರಾ ರಿಮೇಕ್ ಮಾಡಿದ್ದಾರೆ. ಚಿತ್ರದ ಟ್ರೇಲರ್‌ಗಳನ್ನು ನೋಡಿದರೆ ರಿಮೇಕ್ ಒರಿಜಿನಲ್‌ಗಿಂತ ಹೆಚ್ಚು ಶ್ರೀಮಂತವಾಗಿದೆ! ಜನವರಿ 26ಕ್ಕೆ ಬಿಡುಗಡೆ ದಿನಾಂಕವನ್ನು ಹೃತಿಕ್ ಅಭಿಮಾನಿಗಳು ಎದುರು ನೋಡುತ್ತಿದ್ದಾರೆ.

ಹಾಗೆ ನೋಡಿದರೆ ಅಮಿತಾಭ್ ನಟಿಸಿದ ಅಗ್ನಿಪಥ್ ಕೂಡಾ ಒರಿಜಿನಲ್ ಅಲ್ಲ. ಅದಕ್ಕೂ ಮುಂಚೆ 1983ರಲ್ಲಿ ಬಂದ ಅಲ್ ಪ್ಯಾಸಿನೋ ನಟಿಸಿದ 'ಸ್ಕಾರ್‌ಫೇಸ್' ಎಂಬ ಚಿತ್ರದ ರಿಮೇಕ್ ಅದು! ಆದರೆ ಮುಕುಲ್ ಆನಂದ್, ಮುಂಬೈಯ ಭೂಗತ ಜಗತ್ತಿನಲ್ಲಿ ಸುದ್ದಿ ಮಾಡಿದ ರೌಡಿ ಮನೋಹರ ಸುರ್ವೆಯ ಕಥೆಯನ್ನು ಮಿಕ್ಸ್ ಮಾಡಿ ಚಿತ್ರವನ್ನು ಸಿದ್ಧಪಡಿಸಿದ್ದ. ಜತೆಗೆ ಚಿತ್ರದ ಟೈಟಲ್‌ಅನ್ನು, ಅಮಿತಾಭ್‌ರ ತಂದೆ ಹರಿವಂಶರಾಯ್ ಬಚ್ಚನ್ ಅವರ ಕವಿತೆಯೊಂದರ ಸಾಲುಗಳಿಂದ ಎತ್ತಿದ್ದೇ ಅಲ್ಲದೆ, ಆರಂಭದಲ್ಲಿ ಆ ಕವಿತೆಯ ಸಾಲುಗಳು ಧ್ವನಿಯಲ್ಲಿ ಮೂಡಿ ಸಿನಿಮಾಕ್ಕೆ ಹೊಸ ಇಮೇಜ್ ಬಂದಿತ್ತು.

ಈಗ ಹೃತಿಕ್ ನಟಿಸಿರುವ 'ಅಗ್ನಿಪಥ್'ನಲ್ಲೂ ಹೊಸದೊಂದು ಎಲಿಮೆಂಟ್ ಇದೆ. ಅದೆಂದರೆ ಸಂಜಯ್ ದತ್ ಖಳನಾಗಿ ನಟಿಸಿದ್ದು. ಅಮಿತಾಭ್ ಚಿತ್ರದಲ್ಲಿ ಡ್ಯಾನಿ ಖಳನ ಪಾತ್ರಕ್ಕೆ ಜೀವ ತುಂಬಿದ್ದ. ಇಲ್ಲಿ ಸಂಜಯ್ ದತ್, ಡ್ಯಾನಿಯನ್ನೂ ಮೀರಿಸಿದಂತೆ ನಟಿಸಿದ್ದಾನೆಂಬ ಸುದ್ದಿ ಇದೆ.

■ ಬಿಂದು